**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**ಎಸ್ .ಸಿ. ನಂಃ 18/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **01**
ಸಿ.ಡಬ್ಲ್ಯೂ ನಂಃ **01**
ಸಾಕ್ಷಿಯನ್ನು ದಿನಾಂಕಃ **22-11-2022**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರಳ ಹೆಸರು | ಃ | ಬಸವಣ್ಣೆವ್ವ |
| ಗಂಡನ ಹೆಸರು | ಃ | ಈರಪ್ಪ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಮನೆಗೆಲಸ |
| ವಾಸ ಸ್ಥಳ | ಃ | ಗುಡ್ಡದದೇವಲಾಪುರ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಮಾವ ಮತ್ತು ನಾದಿನಿ. 1ನೇ ಆರೋಪಿ ನನ್ನ ಗಂಡ. 3ನೇ ಆರೋಪಿ ನನ್ನ ಅತ್ತೆ. ನಮ್ಮ ತಂದೆ-ತಾಯಿಗೆ ನಾವು 3 ಜನ ಮಕ್ಕಳು. ನನ್ನ ಮತ್ತು ಈರಪ್ಪನ ಮದುವೆ ನಾವು ಇಷ್ಟ ಪಟ್ಟು 10-12 ವರ್ಷಗಳ ಹಿಂದೆ ಕುಷ್ಟಗಿ ಬುತ್ತಿ ಬಸವೇಶ್ವರ ದೇವಸ್ಥಾನದಲ್ಲಿ ಆಯಿತು.

ಮದುವೆಯಾದ ನಂತರ 7-8 ವರ್ಷ ನಾವು ಚೆನ್ನಾಗಿದ್ದೆವು, ನಂತರದಲ್ಲಿ ಕಿರಿಕಿರಿ ಮಾಡುತ್ತಿದ್ದರು. ವರದಕ್ಷಿಣೆ ಬಂಗಾರ ತಂದಿಲ್ಲ ಎಂದು ನನಗೆ ಹಿಂಸೆ ಕೊಡುತ್ತಿದ್ದರು. ನೀನು ತವರುಮನೆಗೆ ಹೋಗು ನಾನು ಇನ್ನೊಂದು ಮದುವೆ ಮಾಡಿಕೊಳುತ್ತೇನೆ ಎಂದು 1ನೇ ಆರೋಪಿ ಹೇಳುತ್ತಿದ್ದ, 50 ಸಾವಿರ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹಿಂಸೆ ಕೊಡುತ್ತಿದ್ದರು, ಡೈವೊರ್ಸ ಕೊಡು ಇಲ್ಲದಿದ್ದರೆ ಇನ್ನೊಂದು ಮದುವೆಯಾಗುತ್ತೇನೆಂದು ಹೇಳುತ್ತಿದ್ದನು.

ದಿಃ 8-8-2016 ರಂದು ಮಧ್ಯಾಹ್ನ 12 ಗಂಟೆಗೆ ನಾನು ಗಂಡನ ಮನೆಯಲ್ಲಿದ್ದಾಗ ಅತ್ತೆ ನಾದಿನಿ ಇಬ್ಬರು ತಲೆಯ ಕೂದಲು ಹಿಡಿದು ಬಡಿದರು ನನ್ನ ಮಾವ ನನಗೆ ಒದ್ದರು, ನನ್ನ ಗಂಡ ಅವಾಚ್ಯ ಶಬ್ದಗಳಿಂದ ಬೈಯ್ದು ಕೊಡಲಿ

ತಂದು ನಿನ್ನನ್ನು ಮುಗಿಸುತ್ತೇನೆ ಎಂದು ನನ್ನನ್ನು ಹೊಡೆಯಲು ಬಂದಿದ್ದು, ನನಗೆ ಬೀಳಬೇಕಾಗಿದ್ದ ಏಟು ಬಾಗಿಲಿಗೆ ಬಿದ್ದು ಬಾಗಿಲು ಸೀಳಿಕೊಂಡಿತ್ತು. ನಾನು ಈ ವಿಷಯವನ್ನು ಊರಿನ ಹಿರಿಯವರಿಗೆಲ್ಲಾ ತಿಳಿಸಿ ರಾತ್ರಿ 10 ಗಂಟೆಗೆ ಠಾಣೆಗೆ ಬಂದು ದೂರನ್ನು ಕೊಟ್ಟೆ. ಗಂಗಪ್ಪ ಮತ್ತು ಮಹೇಶ ಜಗಳ ಬಿಡಿಸಿ ಬುದ್ದಿವಾದ ಹೇಳಿದ್ದರು. ನೀನು ಮನೆಯೊಳಗೆ ಬರಕೂಡದು ನಾವು ಕರೆದುಕೊಳ್ಳುವುದಿಲ್ಲ ಎಂದು ಹೇಳಿದರು, ನನ್ನನ್ನು ಮನೆಯಿಂದ ಹೊರಗೆ ಹಾಕಿದರು. ನಿನ್ನ ಜೀವ ಉಳಿಸುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿದ್ದರು. ಈಗ ನನಗೆ ತೋರಿಸಿದ ದೂರಿನಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ 1 ಎಂದು, ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಮರುದಿನ ಪೊಲೀಸರು ಬಂದು ಪಂಚನಾಮೆ ಮಾಡಿದ್ದರು. ನಾನು ಪೊಲೀಸರಿಗೆ ಸ್ಥಳ ತೋರಿಸಿದೆ. ಈಗ ನನಗೆ ತೋರಿಸಿದ ಫೋಟೋ ಪಂಚನಾಮೆ ಕಾಲಕ್ಕೆ ತೆಗೆದಿದ್ದು, ಅದನ್ನು ನಿಪಿ 2 ಎಂದು ಗುರುತಿಸಲಾಯಿತು. ಅಲ್ಲಿ ಬಿದ್ದಿದ್ದ ಬಾಗಿಲ ಚೂರು ಮತ್ತು ಕೊಡ್ಲಿಯನ್ನು ಪೊಲೀಸರು ಜಪ್ತ ಮಾಡಿಕೊಂಡರು.

ಅಕ್ಕಪಕ್ಕದವರು ಬುದ್ದಿ ಹೇಳಿದ್ದರು. ಈ ಬಗ್ಗೆ ಪೊಲೀಸರು ವಿವರವಾದ ಹೇಳಿಕೆ ಮಾಡಿಕೊಂಡಿದ್ದಾರೆ. ನ್ಯಾಯಾಲಯದ ಮುಂದೆ ಇರುವ 2 ಉದ್ದನೆಯ ರೀಪುಗಳು, 1 ಚೌಕ ರೀಪು, ಹಾಗೂ ಪ್ಲೈವುಡನ 2 ಸಣ್ಣ ತುಕಡಿಗಳು ಮತ್ತು ಕೊಡ್ಲಿ ಇವುಗಳನ್ನು ಜಪ್ತ ಮಾಡಿಕೊಂಡರು.

ಈ ಹಂತದಲ್ಲಿ ಮುದ್ದೆಮಾಲುಗಳನ್ನು ಹಾಜರುಪಡಿಸದೇ ಇರುವುದರಿಂದ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.
(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶ್ರೀಮತಿ ಬಿ ಎಸ್ ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ